**<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಾಲಯ.</u>**

**<u>ರಟ್ಟೀಹಳ್ಳಿ.</u>**

**<u>ಸಿ.ಸಿ.ನಂಬರ್ಃ 297/2018</u>**

ಸಿಡಬ್ಲ್ಯೂಃ 5

ಪಿಡಬ್ಲ್ಯೂಃ 7

| | | |
|---|---|---|
| ಸಾಕ್ಷಿಯ ಹೆಸರು | : | ಮಹೇಶಪ್ಪ ಕ್ಯಾತಪ್ಪಳವರ |
| ತಂದೆಯ ಹೆಸರು | : | ಭೀಮನಗೌಡ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ದೊಡ್ಡಗುಬ್ಬಿ |

ಇಂದು ದಿನಾಂಕಃ 19.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎಪಿಪಿಯವರಿಂದಃ

1. ಸಾಕ್ಷಿಯು ಘಟನಾ ಜಾಗದ ಪಂಚನಾಮೆಯಾದ ನಿಪಿ-9ರ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಸಹಿಗಳನ್ನು ನಿಪಿ-9(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಸುಮಾರು 7-8 ವರ್ಷಗಳ ಹಿಂದೆ ರಟ್ಟೀಹಳ್ಳಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಆ ಕಾಲಕ್ಕೆ ನನ್ನ ಜೊತೆ ಯಾರು ಇರಲಿಲ್ಲ. ನಿಪಿ-9ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರಗೆ ಸಹಿಗಳನ್ನು ಮಾಡಿರುತ್ತೇನೆ. ಸಾಕ್ಷಿಯು ಪಂಚನಾಮೆ ಕಾಲಕ್ಕೆ ತೆಗೆದ ನಿಪಿ-2ರ ಪೋಟೋದಲ್ಲಿ ತಾವು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋವನ್ನು ರಟ್ಟೀಹಳ್ಳಿ ಪೊಲೀಸ್ ಠಾಣೆಯಲ್ಲಿ ತೆಗೆದಿರುತ್ತಾರೆ. ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ಸಾಕ್ಷಿಯು ವಾಹನ ಪಂಚನಾಮೆಯಾದ ನಿಪಿ-10ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅದೇ ದಿನ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಆ ಕಾಲಕ್ಕೆ ನನ್ನ ಜೊತೆ ಯಾರು ಇರಲಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ನಿಪಿ-10ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರಗೆ ಸಹಿಯನ್ನು ಮಾಡಿರುತ್ತೇನೆ.

3. ಸಾಕ್ಷಿಯು ನಿಪಿ-12 ಮತ್ತು 13 ರಲ್ಲಿರುವ ಪೋಟೋಗಳನ್ನು ತಾವು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ಠಾಣೆಯಲ್ಲಿ ತೆಗೆದಿರುತ್ತಾರೆ. ಸದರಿ ಪೋಟೋಗಳನ್ನು ಆಟೋ ಮತ್ತು ಕಾರ್ ಇರುತ್ತವೆ. ನಿಪಿ-12 ಮತ್ತು 13 ರ ಪೋಟೋಗಳನ್ನು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

<u>**ಪಾಟೀ ಸವಾಲುಃ**</u> ಮಾನ್ಯ ಎಪಿಪಿಯವರಿಂದಃ

1. ದಿನಾಂಕಃ 21.02.2018 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ-4 ರವರನ್ನು ಅಪಘಾತವಾದ ರಟ್ಟೀಹಳ್ಳಿ ರಾಣೇಬೆನ್ನೂರು ರಸ್ತೆಯ ಸಿದ್ದಪ್ಪ ಬಣಕಾರರವರ ಜಮೀನಿಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಚಾಸಾ-1 ರವರು ತೋರಿಸಿದ ಜಾಗದಲ್ಲಿ ಪೊಲೀಸರು ಸಂಜೆ 4-30 ರಿಂದ 5-30 ವರೆಗೆ ನಿಪಿ-9 ರಂತೆ ಪಂಚನಾಮೆ ಮಾಡಿ, ಓದಿ ಹೇಳಿ, ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ-2 ರ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿರುವ ರಸ್ತೆ ರಾಣೇಬೆನ್ನೂರು-ರಟ್ಟೀಹಳ್ಳಿ ರಸ್ತೆ ಎಂದರೆ ನನಗೆ ಗೊತ್ತಿಲ್ಲ.

2. ನಂತರ ಅಲ್ಲಿಂದ ನನ್ನನ್ನು ಹಾಗೂ ಚಾಸಾ-4 ರವರನ್ನು ರಟ್ಟೀಹಳ್ಳಿ ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಚಾಸಾ-1 ರವರು ತೋರಿಸಿದ ಅಪಘಾತಪಡಿಸಿದ ಕಾರ ನಂಬರಃ ಕೆಎ-27/ಎಮ್-8558 ಹೂಂಡಾಯ ಕಂಪನಿಯ ಕಪ್ಪು ಬಣ್ಣದ ಕಾರು, ಅಲ್ಲಿಲ್ಲ ಜಖಮಗೊಂಡಿದ್ದು ಮತ್ತು ಒಂದು ಹಳದಿ ಬಣ್ಣದ ಪೈಬೋ ಅಪ್ಪೆ ಕಂಪನಿಯ ಆಟೋ ನಂಬರಃ ಕೆಎ-27/ಬಿ-2155 ಗಳನ್ನು ನಮ್ಮ ಸಮಕ್ಷಮ ನಿಪಿ-10 ರಂತೆ ಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ-12 ಮತ್ತು 13 ರಲ್ಲಿರುವ ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ**</u> ಆರೋಪಿ ಪರ ಶ್ರೀ. ಎಸ್.ಹೆಚ್.ಪಿ. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ.

**<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಾಲಯ.</u>**

**<u>ರಟ್ಟೀಹಳ್ಳಿ.</u>**

**<u>ಸಿ.ಸಿ.ನಂಬರ್ಃ 297/2018</u>**

ಸಿಡಬ್ಲ್ಯೂಃ 10

ಪಿಡಬ್ಲ್ಯೂಃ 8

| | | |
|---|---|---|
| ಸಾಕ್ಷಿಯ ಹೆಸರು | : | ವಿರುಪಾಕ್ಷಪ್ಪ ಕ್ಯಾತಪ್ಪಳವರ |
| ತಂದೆಯ ಹೆಸರು | : | ಹನುಮಂತಪ್ಪ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ದೊಡ್ಡಗುಬ್ಬಿ |

ಇಂದು ದಿನಾಂಕಃ 19.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎಪಿಪಿಯವರಿಂದಃ

1. ಚಾಸಾ–1 ಮತ್ತು 5 ರಿಂದ 9 ನನಗೆ ಗೊತ್ತಿಲ್ಲ. ಮೃತ ಹನುಮಂತಪ್ಪ ನನಗೆ ಗೊತ್ತಿಲ್ಲ. ಆರೋಪಿ ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಮೃತ ಹನುಮಂತಪ್ಪ ಜೀವಂತ ಇರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ–12 ಮತ್ತು 13ರಲ್ಲಿರುವ ವಾಹನಗಳು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>** ಮಾನ್ಯ ಎಪಿಪಿಯವರಿಂದಃ

1. ದಿನಾಂಕಃ 20.02.2018 ರಂದು ಸಾಯಂಕಾಲ ನಾನು ದೊಡ್ಡಗುಬ್ಬಿಗೆ ಹೋಗಿ ಕೆಲಸ ಮುಗಿಸಿಕೊಂಡು ರಟ್ಟೀಹಳ್ಳಿ ಕಡೆಗೆ ಬರುವಾಗ ಹುಗ್ಗಿಯವರ ಹೊಲದ ಹತ್ತಿರ ಸಂಜೆ 7–30 ಗಂಟೆಗೆ ನನ್ನ ಮುಂದೆ ಒಬ್ಬ ಆಟೋ ಚಾಲಕ ತಮ್ಮ ಅಟೋವನ್ನು ನಿಧಾನವಾಗಿ ನಡೆಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಎದುರಿನಿಂದ ಒಬ್ಬ ಕಾರ ಚಾಲಕನು ರಾಣೇಬೆನ್ನೂರಿನಿಂದ ರಟ್ಟೀಹಳ್ಳಿ ಕಡೆಗೆ ತನ್ನ ಕಾರನ್ನು ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು ಆಟೋಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿ ಅದರಿಂದ ಆಟೋ ಪಲ್ಟಿ ಆಗಿರುತ್ತದೆ ಎಂದರೆ ಸರಿಯಲ್ಲ.

2. ನಾನು ಮತ್ತು ಚಾಸಾ-9 ರವರು ಆಟೋದಲ್ಲಿದ್ದ ಚಾಸಾ-1, 6 ಹಾಗೂ ಮೃತ ಹನುಮಂತಪ್ಪರವರನ್ನು ವಿಚಾರಿಸಿ ನೋಡಿದಾಗ ಅವರಿಗೆ ತಲೆಗೆ ಮೈಕೈಗೆ ಗಾಯದ ಪೆಟ್ಟುಗಳು ಆಗಿದ್ದವು ಎಂದರೆ ಸರಿಯಲ್ಲ. ಅದೇ ರೀತಿ ಮೃತ ಹನುಮಂತಪ್ಪರವರಿಗೆ ಬಲಗಾಲಿನ ಮೊಣಕಾಲಿಗೆ, ಎಡಗಾಲಿನ ತೊಡೆ, ಮೊಣಕಾಲಿಗೆ ಎಡಗೈಗೆ ಭಾರಿ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ನಂತರ ಆಟೋ ಚಾಲಕನ ಹೆಸರನ್ನು ಕೇಳಿದಾಗ ಅವರು ಮಹಮ್ಮದಅಲಿ ಬಾಬಾಜಾನಸಾಬ ದೊಡ್ಡಮನಿ ಎಂದು ಹೇಳಿದ್ದು, ಅಪಘಾತಕ್ಕೀಡಾದ ಆಟೋ ನಂಬರ ನೋಡಲಾಗಿ ಅದು ಕೆಎ-27/ಬಿ-2155 ಇದ್ದು ಎಂದರೆ ಸರಿಯಲ್ಲ.

3. ಅದೇ ರೀತಿ ಅಪಘಾತಪಡಿಸಿದ ಕಾರ ನಂಬರನ್ನು ನೋಡಲಾಗಿ ಅದು ಕೆಎ 27/ಎಮ್-8558 ಇದ್ದು, ಕಾರ ಚಾಲಕನ ಹೆಸರನ್ನು ಕೇಳಲಾಗಿ ಸಂತೋಶ ಶಂಕರಪ್ಪ ಕೋಟಿಹಾಳ ಹಾಗೂ ಕಾರಿನಲ್ಲಿದ್ದ ಹೆಣ್ಣುಮಗಳ ಹೆಸರನ್ನು ಕೇಳಲಾಗಿ ಶರಾವತಿ ಎಂದು ಹೇಳಿದರು ಎಂದರೆ ಸರಿಯಲ್ಲ. ನಂತರ ನಾವೆಲ್ಲರೂ ಸೇರಿ ಗಾಯಾಗಳುಗಳನ್ನು ಅಂಬುಲೆನ್ಸ್ ಮೂಲಕ ರಾಣೇಬೆನ್ನೂರಿನ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿ, ನಂತರ ಅಲ್ಲಿ ಉಪಚಾರ ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಗಾಗಿ ಓಂ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಹನುಮಂತಪ್ಪರವರು ಚಿಕಿತ್ಸೆ ಫಲಿಸದೇ ಓಂ ಆಸ್ಪತ್ರೆಯಲ್ಲಿ ಮೃತರಾಗಿದ್ದು, ಆ ಬಗ್ಗೆ ಚಾಸಾ-1 ರವರು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ತಿರಸ್ಕರಿಸಿದ ಹೇಳಿಯ ಭಾಗವನ್ನು ನಿಪಿ-19 ಎಂದು ಗುರುತಿಸಲಾಯಿತು. ಆರೋಪಿಯು ಅತೀ ಜೋರಾಗಿ ಕಾರನ್ನು ಚಲಾಯಿಸಿ, ಅಪಘಾತವಾಗಿ ಅದರಿಂದ ಹನುಮಂತಪ್ಪರವರು ತೀರಿ ಹೋಗಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ. ಎಸ್.ಹೆಚ್.ಪಿ. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,ಸಂಚಾರಿ

ನ್ಯಾಯಪೀಠ ರಟ್ಟೀಹಳ್ಳಿ.